# ಸ್ವಾಮಿ ವಿವೇಕಾನಂದರು ನವಭಾರತದ ಸ್ಫೂರ್ತಿ

■ ಡಾ. ಎಂ.ಚಿದಾನಂದಮೂರ್ತಿ

**ಧರ್ಮರಕ್ಷಣೆಯೇ ಪ್ರತಿಯೊಬ್ಬ ಭಾರತೀಯನ ಕರ್ತವ್ಯವೆಂದು ಸ್ವಾಮೀಜಿ ಹೇಳುತ್ತಾರೆ. ಆದರೆ ಇಂದಿನ ಸನ್ನಿವೇಶ ಅದಕ್ಕೆ ತದ್ವಿರುದ್ಧವಾಗಿದೆ. ಪರಧರ್ಮೀಯರ ಹಲವು ರೀತಿಯ ಆಕ್ರಮಣಗಳಿಂದ ಸನಾತನ ಧರ್ಮದ ಅಸ್ತಿತ್ವಕ್ಕೇ ಆಘಾತ ಬಂದಿದೆ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರಿಂದ ಪ್ರೇರಣೆ ಪಡೆದು ನಮ್ಮ ಧರ್ಮವನ್ನು ಉಳಿಸಿಕೊಳ್ಳಬೇಕು ಎನ್ನುವ ಕಳಕಳಿಯನ್ನು ವ್ಯಕ್ತಪಡಿಸಿರುವ ಲೇಖಕರು ಪ್ರಖ್ಯಾತ ಕನ್ನಡ ಸಾಹಿತಿಗಳು ಮತ್ತು ಸಂಶೋಧಕರು.**

ವರ್ಗಗಳ, ಎಲ್ಲ ಪಂಥಗಳ ಕೋಟ್ಯನುಕೋಟಿ ಜನರ ಪರವಾಗಿ ನಿಮಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ."

ಬ್ರಿಟಿಷರ ದಾಸ್ಯದಲ್ಲಿ ನಲುಗಿ ಎಲ್ಲ ಬಗೆಯ ಸ್ವಾತಂತ್ರ್ಯ ಕಳೆದುಕೊಂಡಿದ್ದ ದೀನಾವಸ್ಥೆಯ ಭಾರತ, ಸ್ವಾಮಿ ವಿವೇಕಾನಂದರ ಧೀರ ಉಪನ್ಯಾಸದ ಮೂಲಕ, ವಿಶ್ವದ ಎಲ್ಲೆಡೆಗಳಿಂದ ಬಂದಿದ್ದ ಎಲ್ಲ ಧಾರ್ಮಿಕ ಮುಖಂಡರ, ಮೆಚ್ಚುಗೆಗೆ ಮಾತ್ರವಲ್ಲ, ಅಪಾರ ಪ್ರಶಂಸೆಯನ್ನೂ ಪಡೆಯಿತು; ವಿವೇಕಾನಂದರು ವಿಶ್ವಮಟ್ಟದ ನಾಯಕರಂತೆ ಕಾಣಿಸಿಕೊಂಡರು.

ಹಿಂದೂಧರ್ಮದ ಶ್ರೇಷ್ಠತೆಯನ್ನು ಅವರು ಧೈರ್ಯವಾಗಿ ಸಾರಿದರು; ಎಲ್ಲ ಧರ್ಮಗಳಿಗಿಂತ ಅದೇ ಶ್ರೇಷ್ಠವೆಂದು ಅವರು ಎಲ್ಲಿಯೂ ಹೇಳಿಲ್ಲ. ಹಿಂದೂಧರ್ಮದ ಚರಿತ್ರೆ, ಇತಿಹಾಸವನ್ನು ಚೆನ್ನಾಗಿಯೇ ಬಲ್ಲ ಅವರು ಇತಿಹಾಸದ ಏರಿಳಿತಗಳು, ಸಮಕಾಲೀನ ಧರ್ಮದ ಕೊರತೆ ಅಥವಾ ದೋಷಗಳು – ಇವುಗಳನ್ನು ಚೆನ್ನಾಗಿಯೇ ಬಲ್ಲವರಾಗಿದ್ದರು. ಬ್ರಿಟಿಷರಿಂದ ನೇರ ಸಹಾಯವನ್ನು, ಬೆಂಬಲವನ್ನು ಪಡೆದು ಮಿಷನರಿಗಳು ಭಾರತೀಯರನ್ನು ಕ್ರಿಶ್ಚಿಯನ್ನರಾಗಿ ಪರಿವರ್ತಿಸಿ, ಕ್ರಮೇಣ ಭಾರತವನ್ನು ಕ್ರಿಶ್ಚಿಯನೀಕರಿಸಿ ಅದು ಶಾಶ್ವತವಾಗಿ, ಇಂಗ್ಲೆಂಡಿನ ದಾಸನಾಗಿ ಉಳಿಯುವಂತೆ ನಡೆಯುತ್ತಿದ್ದ ಕಾರ್ಯಗಳ ಅರಿವಿತ್ತು, ಅವರಿಗೆ. ಮುಂದೆ ನಡೆದ ಸ್ವಾತಂತ್ರ್ಯ ಚಳವಳಿಯ ನೇತಾರರಾದ ಮಹಾತ್ಮ ಗಾಂಧಿಯವರೂ ಕೂಡ ಮತಾಂತರವನ್ನು ಸ್ಪಷ್ಟ ಧ್ವನಿಯಲ್ಲಿ ವಿರೋಧಿಸಿದ್ದಾರೆ. ಇಬ್ಬರೂ ಚಿಂತಕರು, ಅಧ್ಯಾತ್ಮ ಸಾಧಕರು, ಅನ್ಯ ಧರ್ಮದ್ವೇಷವಿಲ್ಲದ ಸ್ವಧರ್ಮ ಪ್ರೇಮಿಗಳು (ಗಮನಿಸಿ, ಗಾಂಧೀಜಿ ತಮ್ಮನ್ನು ತಾವು 'ಸನಾತನಿ ಹಿಂದೂ' ಎಂದೇ ಕರೆದುಕೊಂಡಿದ್ದಾರೆ), ಸತ್ಯಪ್ರೇಮಿಗಳು, ಅಷ್ಟೇ ಮುಖ್ಯವಾಗಿ ನಿರ್ಭೀತ ವ್ಯಕ್ತಿತ್ವವುಳ್ಳವರು. ಅವರಿಂದ ಭಾರತೀಯ ಸಂಸ್ಕೃತಿ, ಭಾರತ ಇವು ತಮ್ಮ ಅಸ್ಮಿತೆಯನ್ನು ಕಂಡುಕೊಳ್ಳಲು ಸಾಧ್ಯವಾಯಿತು.

ಇಂದಿನ ದಿನಗಳಲ್ಲಿ, ಸ್ವತಂತ್ರ ಭಾರತದಲ್ಲಿ ಜನ ಸತ್ಯವನ್ನು ಹೇಳಲು ಹೆದರುವಷ್ಟು ಹೇಡಿಗಳಾಗಿದ್ದಾರೆ. ಯಾರು ಏನೆಂದುಕೊಳ್ಳುವರೋ, ಯಾವ ಪ್ರಶಸ್ತಿ ಅಥವಾ ಸ್ಥಾನಕ್ಕೆ ಧಕ್ಕೆಯಾಗುವುದೋ, ಯಾರಾದರೂ ಮೇಲೆ ಬಿದ್ದರೆ ಗತಿಯೇನು, "ಅದಕ್ಕೂ ನನಗೂ ಸಂಬಂಧವೇನು?" ಅಥವಾ "ಅದನ್ನು ಕಟ್ಟಿಕೊಂಡು ಏನಾಗಬೇಕು?" ಇತ್ಯಾದಿಯಾಗಿ ಯೋಚಿಸುತ್ತ ಮೌನ ವಹಿಸುತ್ತಾರೆ. ಯಾವುದರಿಂದ ಹೆಚ್ಚು ಲಾಭವೋ ಆ ಬಗ್ಗೆ ಮಾತನಾಡುತ್ತಾರೆ. ಮತಾಂತರದ ವಿಷಯವನ್ನೇ ತೆಗೆದುಕೊಳ್ಳಿ, ಇಂದು ಕ್ರಿಶ್ಚಿಯನ್ನರಿಂದ ಬಹು ಸಂಖ್ಯೆಯಲ್ಲಿ ಮತಾಂತರಗಳಾಗುತ್ತಿದ್ದರೂ ಬಹುತೇಕ ವಿದ್ಯಾವಂತರು ಆ ಬಗ್ಗೆ ಮೌನವಹಿಸಿದ್ದಾರೆ. "ಎಲ್ಲ ಧರ್ಮಗಳೂ ಒಂದೇ, ಮತಾಂತರ ಹೊಂದಿದರೆ ತಪ್ಪೇನು? ಶಿವ, ವಿಷ್ಣು, ಏಸು, ಅಲ್ಲಾಹ್– ಇವರೆಲ್ಲ ಒಂದೇ" – ಹೀಗೆ ವಿಚಾರ ಮಾಡುತ್ತ, ಮತಾಂತರದ ವಿರುದ್ಧ ಧ್ವನಿಯೆತ್ತಿದರೆ, ಎಲ್ಲಿ ತನ್ನನ್ನು ಮತೀಯವಾದಿ, ಕೋಮುವಾದಿ ಎಂದು ಮುಂತಾಗಿ ಕರೆಯುತ್ತಾರೋ ಎಂಬ ಭಯದಿಂದ ನಡುಗುತ್ತ ಮೌನವಹಿಸುತ್ತಾರೆ. ಮತಾಂತರದ ವಿರುದ್ಧ ಧ್ವನಿಯೆತ್ತಿದವರನ್ನು ಕೋಮುವಾದಿಗಳೆಂದು ತುಂಬಿದ ಉತ್ಸಾಹದಿಂದ ಜರೆಯುತ್ತಾರೆ, ಅದು 'ಲಾಬೀ (Lobby) ಕರಣ' ಸ್ವ ಲಾಭೀಕರಣ ಸ್ವ ವೈಭವೀಕರಣದ ಒಂದು ಸುಲಭ ಮಾರ್ಗ; ಲಾಭೀಕರಣವು ಸ್ವಲಾಬೀಕರಣದ ಒಂದು ಪ್ರಮುಖ ಭಾಗ.

ಭಾರತದ ಈಶಾನ್ಯ ರಾಜ್ಯಗಳಲ್ಲಿ ಕ್ರಿಶ್ಚಿಯನ್ನರ ಸಂಖ್ಯೆ ಶೇಕಡ ಎಂಬತ್ತರಷ್ಟು ಇದೆ. ಅಲ್ಲಿ ಭಾರತದಿಂದ ಬೇರೆಯಾಗಬೇಕು ಎನ್ನುವ ಧ್ವನಿ ಹೊರಟಿದೆ. ಹಿಂದೂ ಧರ್ಮದ ಕೊರತೆಗಳೇನೇ ಇರಲಿ, ಅಸ್ಪೃಶ್ಯತೆಯ ಭಾವನೆ ಕಡಿಮೆಯಾಗುತ್ತಿರುವುದು ಒಂದು ಸಮಾಧಾನದ ಸಂಗತಿ – ಅದು ಎಂದೂ ಮತಾಂತರವನ್ನು ಪ್ರೋತ್ಸಾಹಿಸಿಯೂ ಇಲ್ಲ; ಬೆಂಬಲಿಸಿಯೂ ಇಲ್ಲ. ಭಾರತದಿಂದ ಹಿಂದೂ ಧರ್ಮ ಕಣ್ಮರೆಯಾದರೆ ಇಡೀ ವಿಶ್ವದಿಂದ ಅದು ಮರೆಯಾದಂತೆ. ಈ ಬಗ್ಗೆ ಬಹು ಜನರು ಯೋಚಿಸುತ್ತಿಲ್ಲ. ನಮ್ಮ ರಾಷ್ಟ್ರದಲ್ಲಿ ಬಡತನ ಇದೆ; ಅಸ್ಪೃಶ್ಯತೆ ಇದೆ – ಅವೆಲ್ಲವೂ ತಿಳಿದೇ ನಾವು ಭಾರತವನ್ನು ಪ್ರೀತಿಸುತ್ತ, ಅವುಗಳ ನಿವಾರಣೆ ಬಗ್ಗೆ ಪ್ರಯತ್ನಿಸಬೇಕು. ಭಾರತವನ್ನು ಅಮೆರಿಕಕ್ಕೆ ಒಪ್ಪಿಸಿಕೊಂಡು ಬಿಟ್ಟರೆ ಕ್ಷಣಕಾಲದಲ್ಲಿ ಬಡತನ ನಿವಾರಣೆಯಾಗುತ್ತದೆ, ಅಸ್ಪೃಶ್ಯತೆ ತೊಲಗುತ್ತದೆ. ಹಾಗೆ ಮಾಡಲು ಸಾಧ್ಯವೇ? ಹಾಗೆ ಮಾಡುವುದೇ ಸರಿಯೆಂದು ಸದ್ಯ ಬಹಿರಂಗವಾಗಿ ಯಾವ ಮೂರ್ಖನೂ

ವಾದಿಸುತ್ತಿಲ್ಲ ಎಂಬುದು ಸಮಾಧಾನದ ಸಂಗತಿ. ಈ ವಿಷಯದಲ್ಲಿ ನಮಗೆ ಗೊತ್ತಿರಬೇಕಾದ್ದು – ಮಾತೃಭೂಮಿಯೇ ಮಾತೃಧರ್ಮವೇ ಶ್ರೇಷ್ಠ ನಮಗೆ. ಅವರವರಿಗೆ ಅವರವರ ರಾಷ್ಟ್ರ, ಧರ್ಮ ಶ್ರೇಷ್ಠ.

ಇಂದು ಇಸ್ಲಾಂ ಎಲ್ಲ ಕಡೆ ಭಯೋತ್ಪಾದನೆಯ ಪ್ರಬಲ ಕೇಂದ್ರವಾಗಿ ಬೆಳೆಯುತ್ತಿದೆ. ದಿನಬೆಳಗಾದರೆ ಆತ್ಮಾಹುತಿ ಬಾಂಬ್ ಸ್ಫೋಟ, ಉಗ್ರರ ಭಯೋತ್ಪಾದನೆ ಎಲ್ಲೆಡೆ ತಾಂಡವವಾಡುತ್ತಿದೆ. ಪಾಕಿಸ್ತಾನದಿಂದ ಬಹುಹಿಂದೆಯೇ ಹಿಂದುಗಳ ಉಚ್ಚಾಟನೆ ಆಯಿತು. ಈಗ ಅಲ್ಲಿ ಉಳಿದಿರುವ ಅಲ್ಪಸಂಖ್ಯಾತ ಹಿಂದುಗಳು ದೀನರಾಗಿ ಬದುಕುತ್ತಿದ್ದಾರೆ ಅಥವಾ ಅಸುನೀಗುತ್ತಿದ್ದಾರೆ, ಅಲ್ಲೇ, ಮುಸ್ಲಿಮರ ಮಧ್ಯೆಯೇ ತೀವ್ರ ಘರ್ಷಣೆಗಳಾಗುತ್ತಿವೆ. ಭಾರತದ ಭಾಗವೇ ಆಗಿರುವ ಕಾಶ್ಮೀರದ ಬ್ರಾಹ್ಮಣರು 'ವಲಸೆ' ಬರುತ್ತಿದ್ದಾರೆ, ತಮ್ಮ ರಾಷ್ಟ್ರ ಭಾರತಕ್ಕೆ. ಮುಸ್ಲಿಂ ರಾಷ್ಟ್ರಗಳಲ್ಲಿ ಬಲಾತ್ಕಾರದ ಮತಾಂತರಗಳಾಗುತ್ತಿವೆ. ಅಸಹನೆ ಆ ಧರ್ಮದ ಮೂಲಮಂತ್ರವಾಗಿದೆ. ಮಸೀದಿಗಳು ಭಯೋತ್ಪಾದನೆಯ ಕೇಂದ್ರಗಳಾಗುತ್ತಿವೆ. ಅಂತಹ ಗುಮಾನಿ ಭಾರತದ ಮಸೀದಿಗಳ ಬಗ್ಗೆಯೂ ಇದೆ. ಸ್ವಾಮಿ ವಿವೇಕಾನಂದರೇ ಈ ವಿಷಯವಾಗಿ ಹೀಗೆ ಹೇಳುತ್ತಾರೆ: " ...ಇಸ್ಲಾಂ ಧರ್ಮವು ತನ್ನ ಧರ್ಮಕ್ಕೆ ಸೇರದವರೆಲ್ಲರನ್ನೂ ಕೊಲ್ಲುವುದನ್ನು ಒಪ್ಪುತ್ತದೆ. 'ನಾಸ್ತಿಕರು ಮಹಮ್ಮದೀಯರಾಗದೆ ಇದ್ದರೆ ಅವರನ್ನು ಕೊಲ್ಲು' ಎಂದು ಖುರಾನಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಹಾಗೆಯೇ ಅವರನ್ನು ಖಡ್ಗಕ್ಕೆ ಬಲಿಕೊಡಬೇಕು, ಬೆಂಕಿಗೆ ಹಾಕಬೇಕು ಎಂದೂ ಇದೆ." (ಸ್ವಾಮಿ *ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೨, ಪುಟ ೨೮೧*).

ಖುರಾನಿನ ಮಾತುಗಳು ಹಿಂಸಾತ್ಮಕ ಮನೋಧರ್ಮದ ಮುಸ್ಲಿಮರಿಗೆ ಒಂದು ಬೋಧನೆ, ಮಾರ್ಗದರ್ಶಿ ಮಾತ್ರವಲ್ಲ; ಅವರಿಗೆ ಅದು ಆದೇಶ. ವಿಶ್ವದ ಎಲ್ಲ ಕಡೆ ಅವರ ಬಗ್ಗೆ ಜನರಿಗೆ ಗುಮಾನಿಗಳು ಬಂದಿವೆ. ಇಂತಹ ವಾಸ್ತವಗಳ ಕಡೆ ನಮ್ಮ ಲೇಖಕರು, ಬುದ್ಧಿಜೀವಿಗಳು ಗಮನಹರಿಸುತ್ತಿಲ್ಲ. ಎಲ್ಲ ಮುಸ್ಲಿಮರೂ ಕೆಟ್ಟವರಲ್ಲ, ಅವರಲ್ಲೂ ಕೆಲವರು ಸಜ್ಜನರಿದ್ದರೂ ಅವರು ನಾಲಗೆ ಕಳೆದುಕೊಂಡಿದ್ದಾರೆ. ಅಂತಹ ಸಜ್ಜನ ಮುಸ್ಲಿಮರ ಜೊತೆ ಸೇರಿಕೊಂಡು ನಾಡಿನ ಚಿಂತಕರು, ಇಸ್ಲಾಮ್‌ನ ಮೂಲ ಭೂತವಾದದ ವಿರುದ್ಧ ಧ್ವನಿಯೆತ್ತಬೇಕು.

ಈ ಪ್ರಮುಖ ವಿಷಯದ ಕಡೆ ಯಾರೂ ಗಮನವಿತ್ತಿಲ್ಲ. ಭಾರತದ ಸಂವಿಧಾನ ಎಲ್ಲರಿಗೂ ಅನ್ವಯವಾಗುತ್ತದೆ; ಹಾಗೆಯೇ ಸಮಾನ ವಿವಾಹ ಕಾನೂನು ಕೂಡ. ವಿವಾಹ ಕಾನೂನಿನ ಪ್ರಕಾರ, ಒಬ್ಬನು ಒಬ್ಬ ಸ್ತ್ರೀ ಜೊತೆ ಮದುವೆ ಮಾಡಿಕೊಳ್ಳಬಹುದು; ಎರಡನೆಯ ಹೆಂಡತಿಗೆ ಕಾನೂನಿನಲ್ಲಿ ಅವಕಾಶವಿಲ್ಲ. ಕೋರ್ಟ್‌ನಿಂದ ವಿವಾಹ ವಿಚ್ಛೇದನ ಪಡೆದು ಇನ್ನೊಬ್ಬಳನ್ನು ಮದುವೆ ಆಗಬಹುದು. ಆದರೆ ಈ ವಿಧಿಯಿಂದ ಮುಸ್ಲಿಮರಿಗೆ ವಿನಾಯ್ತಿ ಇದೆ. ಹೀಗಾಗಿ ಒಬ್ಬ ಮುಸ್ಲಿಂ ಏಕಕಾಲಕ್ಕೆ ನಾಲ್ವರನ್ನು ಮದುವೆಯಾಗಿ, ಮುಂದೆ ತಲಾಖ್ ಹೇಳಿ ಸುಲಭವಾಗಿ ವಿಚ್ಛೇದನ ಪಡೆದು ಮತ್ತೆ ನಾಲ್ವರನ್ನು ಮದುವೆಯಾಗಬಹುದು. ಅವರಿಗೆ ಸಂತಾನ ನಿಯಂತ್ರಣ ಅನ್ವಯವಾಗದು. ಹೀಗಾಗಿ ಭಾರತದಲ್ಲಿ ಮುಸ್ಲಿಮರ ಸಂಖ್ಯೆ ಪ್ರತಿವರ್ಷ ಏರುತ್ತಿರುವುದನ್ನು ಭಾರತೀಯ ಜನಗಣತಿಯ ಅಂಕಿ ಅಂಶಗಳು ಖಚಿತಪಡಿಸಿವೆ. ಇಂತಹ ಕಠೋರ ವಾಸ್ತವಗಳನ್ನು ಸ್ವಾಮಿ ವಿವೇಕಾನಂದರು ಸಹಿಸುತ್ತಿರಲಿಲ್ಲ. ಪ್ರಾಚೀನ ಹಿಂದೂ ದೇವಾಲಯಗಳನ್ನು ನಾಶಪಡಿಸಿ ಅಲ್ಲಿ, ಭಗ್ನ ಹಿಂದೂ ದೇವಾಲಯಗಳ ಜಾಗಗಳಲ್ಲಿ, ಮಸೀದಿ ದರ್ಗಾ ನಿರ್ಮಿಸಿರುವುದು ಎದ್ದುಕಾಣುವ ಸಂಗತಿ.

ಈ ಸಂದರ್ಭದಲ್ಲಿ ಒಟ್ಟು ಜನತೆ ಶಾಂತವಾಗಿ ಸಿಡಿದೇಳಬೇಕು. **'ಶಾಂತಿ ಶಾಂತಿ'** ಎಂದು ಹೇಳಿಕೊಂಡು, ಧರ್ಮನಿರಪೇಕ್ಷತೆ, ಸೋದರತ್ವ ಎಂದೆಲ್ಲ ಹಿಂದೂಗಳು ಹೇಳಿಕೊಂಡು, ವಾಸ್ತವಗಳನ್ನು ಮರೆಯುತ್ತಿದ್ದಾರೆ. ಹಿಂದೂಗಳು ಎಂದೂ ಹಿಂಸೆಗೆ ಇಳಿದಿಲ್ಲ; ಹಿಂಸೆಗೆ ಅದರಲ್ಲಿ ಅವಕಾಶವಿಲ್ಲ; ಹಿಂಸೆಗೆ ಎಂದೂ ಇಳಿಯಬಾರದು. ಆದರೆ ಒಗ್ಗಟ್ಟಿನಿಂದ ನಿಂತು ಪಕ್ಷಾತೀತವಾಗಿ ಮತಾಂತರ, ಉಗ್ರವಾದ, ದೇವಾಲಯ ಹಾಗೂ ವಿಗ್ರಹ ಭಂಜನ ಇಂಥವನ್ನು ಸಾರ್ವಜನಿಕವಾಗಿ ಪ್ರತಿಭಟಿಸಿ, ಶಾಸಕರನ್ನು ಒತ್ತಾಯಿಸಿ, ಆ ಬಗ್ಗೆ ಕಾನೂನು ರೂಪುಗೊಂಡು ಜಾರಿಯಾಗುವಂತೆ ಮಾಡಬೇಕು. ಈಗಾಗಲೇ ಕರ್ನಾಟಕ ಸರ್ಕಾರಕ್ಕೆ ಎಲ್ಲ ಬಗೆಯ ಅಧಿಕೃತ ದಾಖಲೆಗಳನ್ನು ಒಳಗೊಂಡಂತೆ 'ಮತಾಂತರ ನಿಷೇಧ ಕಾನೂನು' ರೂಪಿಸಲು ಒಂದು ವಿಸ್ತೃತ ವರದಿಯನ್ನು ನೀಡಲಾಗಿದೆ; ಸಾಕಷ್ಟು ಒತ್ತಡ ಹಾಕಲಾಗಿದೆ; ನಮ್ಮ ಒಳಪ್ರಯತ್ನ ನಿರಂತರವಾಗಿ ಮುಂದುವರಿದಿದೆ.

ಇಂದಿನ ವಾಸ್ತವಗಳನ್ನು ನೆನೆದರೆ ನನ್ನ ರಕ್ತ ಕುದಿಯುತ್ತದೆ; ಹಾಗೆಯೇ ನನ್ನ ಹೆಮ್ಮೆಯ ಹಿಂದೂ ಧರ್ಮವು ಬಂದು ಸಾಂತ್ವನಗೊಳಿಸಿ ಮನಸ್ಸನ್ನು ಸ್ತಿಮಿತಗೊಳಿಸುತ್ತದೆ. **'ಏಕಂ ಸತ್ ವಿಪ್ರಾ ಬಹುಧಾ ವದಂತಿ'** ( ಸತ್ಯ ಒಂದೇ, ತಿಳಿದವರು ಅದನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ) ; **'ಸರ್ವೇಜನಾಃ ಸುಖಿನೋ ಭವಂತು'** ( ಎಲ್ಲ ಜನರೂ ಸುಖಿಗಳಾಗಿ ಬಾಳಲಿ) ; ಹಾಗೆಯೇ ಭಗವದ್ಗೀತೆಯ **'ಕ್ಷುದ್ರಂ ಹೃದಯದೌರ್ಬಲ್ಯಂ, ತ್ಯಕ್ತ್ವೋತ್ತಿಷ್ಠ ಪರಂತಪ'** (ಕ್ಷುದ್ರವಾದ ಹೃದಯ ದೌರ್ಬಲ್ಯವನ್ನು ತ್ಯಜಿಸಿ, ಹೇ ಶತ್ರುಗಳನ್ನು ಸುಡುವವನೇ, ಎದ್ದೇಳು), ಹಾಗೆಯೇ ಸ್ವಾಮಿ ವಿವೇಕಾನಂದರ ವಾಣಿಯಾದ Arise, awake; stop not till the goal is reached (ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೂ ನಿಲ್ಲದಿರಿ) – ಈ ಮಾತುಗಳು ಮುದ ನೀಡುತ್ತವೆ.


ನಾವು ಮಾಡಬೇಕಾಗಿರುವ ಯುದ್ಧ ಶಸ್ತ್ರಗಳದ್ದು ಅಲ್ಲ; ಸಾತ್ವಿಕ ಹೋರಾಟ, ಶಿಸ್ತುಬದ್ಧ ಹೋರಾಟ; ಸಮಯ ಬಂದರೆ ಸೆರೆಮನೆಗೆ ಹೋಗಲು ಪ್ರಾಣತ್ಯಾಗ ಮಾಡಲು ಸಿದ್ಧವಾಗಿರುವ ಹೋರಾಟ; ಅನ್ಯರಿಗೆ ದೈಹಿಕ ತೊಂದರೆ ಕೊಡದೆ ನಾವೇ ಹಿಂಸೆ ಅನುಭವಿಸುವ ಒಳ ಯುದ್ಧದ ಹೋರಾಟ,

ಓ ಹಿಂದುಗಳೇ, ಸ್ವಾಮಿ ವಿವೇಕಾನಂದರ ಸಿಂಹವಾಣಿ ನೆನಪಿರಲಿ, ನೀವು ಸಿಂಹದ ಮರಿಗಳು – ಕುರಿಗಳ ಮಧ್ಯೆ ಬೆಳೆದಿರುವ ಸಿಂಹದ ಮರಿ ಆಗಬೇಡಿ; ನಿಜವಾದ ಸಿಂಹಗಳಾಗಿ ಗರ್ಜಿಸಿ. ಶುದ್ಧ ಮನಸ್ಸಿನ ಘರ್ಜನೆ ಎಲ್ಲರಿಗೂ ಕೇಳಿಸುತ್ತದೆ. ಎಲ್ಲರ ಹೃದಯವನ್ನೂ ತಾಗುತ್ತದೆ. ರಾಮಕೃಷ್ಣ ಪರಮಹಂಸರ ತಪಸ್ಸು, ಎಲ್ಲ ಧಾರ್ಮಿಕ ದೇವತೆಗಳ ಆರಾಧನೆ, ಬಹುಮುಖೀ ಆಧ್ಯಾತ್ಮಿಕ ಸಾಧನೆ, ಸ್ವಾಮಿ ವಿವೇಕಾನಂದರ ರಾಷ್ಟ್ರಪ್ರೇಮ, ಸಮಕಾಲೀನ ಚಿಂತನೆ– ಇವು ನಮ್ಮನ್ನು ಜಾಗೃತಗೊಳಿಸಲಿ ಎಂದು ನಾನು ಹೃದಯ ತುಂಬಿ, ಕಣ್ತುಂಬಿ ಪ್ರಾರ್ಥಿಸುತ್ತೇನೆ.

# ಸ್ವಾಮಿ ವಿವೇಕಾನಂದರು ತೋರಿದ ಸೇವಾದರ್ಶ

**ಪ್ರೊ. ಕೆ. ಬಿ. ಪ್ರಭುಪ್ರಸಾದ್**

**ಸ್ವಾಮಿ ವಿವೇಕಾನಂದರು ತಮ್ಮ ಬಾಲ್ಯದಿಂದಲೂ ಸೇವಾದರ್ಶವನ್ನು ಮೆರೆದವರು. ಪ್ರಾಚೀನ ವೇದಾಂತ ತತ್ತ್ವವನ್ನು ಸೇವಾತತ್ತ್ವವನ್ನಾಗಿ, ಆಧುನಿಕ ಯುಗದಲ್ಲಿ ಪ್ರಸ್ತುತ ಪಡಿಸಿದ ಹಿರಿಮೆ ಅವರದು. ಅವರ ಜೀವನದಲ್ಲಿ ಕಂಡುಬರುವ ಸೇವಾದರ್ಶದ ಮಿಂಚಿನ ಹೊಳಪುಗಳನ್ನು ಸ್ವಾರಸ್ಯಕರವಾಗಿ ಪರಿಚಯಿಸಿರುವ ಮಾನ್ಯ ಲೇಖಕರು ಕನ್ನಡದ ಹಿರಿಯ ಲೇಖಕರು. ನಿವೃತ್ತ ಕಾಲೇಜು ಪ್ರಾಚಾರ್ಯರಾದ ಇವರು ಶ್ರೀರಾಮಕೃಷ್ಣ ಆಶ್ರಮದ ಆತ್ಮೀಯ ಭಕ್ತರು.**



**ನ**ರೇಂದ್ರ (ಸ್ವಾಮಿ ವಿವೇಕಾನಂದರ ಪೂರ್ವಾಶ್ರಮದ ಹೆಸರು) ಸ್ನೇಹಶೀಲ. ಎಳೆಯಂದಿನಿಂದಲೇ ಒಳ್ಳೆಯ ನಾಯಕನಾಗುವ ಗುಣಲಕ್ಷಣಗಳು ಅವನಲ್ಲಿ ಕಾಣಿಸಿಕೊಂಡಿದ್ದವು. ಬಾಲಕ ನರೇಂದ್ರ ಆಗಾಗ ಸ್ನೇಹಿತರೊಂದಿಗೆ ಹತ್ತಿರದ ಸ್ಥಳಗಳಿಗೆ ವಿಹಾರಕ್ಕೆ ಹೋಗುತ್ತಿದ್ದ. ಒಮ್ಮೆ ಹತ್ತಿಪ್ಪತ್ತು ಹುಡುಗರನ್ನು ಸೇರಿಸಿಕೊಂಡು ಕೊಲ್ಕತಾದ ಕೋಟೆ ನೋಡಲು ಹೊರಟ. ದಾರಿಯಲ್ಲಿ ಜೊತೆಗಾರರಲ್ಲೊಬ್ಬ ಹುಡುಗ ಇದ್ದಕ್ಕಿದ್ದಂತೆ ಅಸ್ವಸ್ಥನಾಗಿ, "ಅಸಾಧ್ಯ ಮೈ ಕೈ ನೋವು, ಸಹಿಸಲಾರೆ" ಎಂದು ಕುಳಿತುಬಿಟ್ಟ. ಜೊತೆಯ ಇತರರು ಅವನನ್ನು ಗೇಲಿ ಮಾಡಿದರೇ ವಿನಾ ಅವನಿಗೆ ಏನಾಗಿದೆ ಎಂದು ವಿಚಾರಿಸಲಿಲ್ಲ. ಹುಡುಗನನ್ನು ಹಿಂದೆ ಬಿಟ್ಟು ಎಲ್ಲರೂ ಮುಂದಕ್ಕೆ ಹೋದರು. ಅವರೊಂದಿಗೆ ಮುನ್ನಡೆದ ನರೇಂದ್ರನಿಗೆ ಒಬ್ಬ ಮಿತ್ರ ಹಿಂದುಳಿದ ಎಂದು ತಿಳಿಯಿತು; ಹಿಂತಿರುಗಿ ಹೋದ. ಸ್ನೇಹಿತನ ದೇಹಸ್ಥಿತಿ ತಿಳಿದು, "ನೀವೆಲ್ಲ ಮುಂದೆ ಹೋಗಿರಿ. ಇಲ್ಲಿದ್ದು ನಾನು ಇವನನ್ನು ನೋಡಿಕೊಂಡಿರುತ್ತೇನೆ" ಎಂದು ಹೇಳಿದ. ಅವರೆಲ್ಲ ಮುಂದೆ ಹೋದರು. ಇತ್ತ ಈ ಹುಡುಗನ ಹಣೆ, ಮೈ ಕೈ ಎಲ್ಲ ಸುಡುತ್ತಿವೆ. ಜ್ವರ ಎಂದು ಗೊತ್ತಾಗಿ ನರೇಂದ್ರ ಅವನಿಗೆ ಆಸರೆ ಕೊಟ್ಟು, ಎತ್ತಿಕೊಂಡು ಒಂದು ಜಟಕಾದಲ್ಲಿ ಕೂರಿಸಿ ವೈದ್ಯರಲ್ಲಿಗೆ ಕರೆದುಕೊಂಡು ಹೋದ. ಚಿಕಿತ್ಸೆ ಆಗುವವರೆಗೆ ಇದ್ದು ಮನೆಗೆ ಕರೆದೊಯ್ದು ದೊಡ್ಡವರಿಗೆ ಹೇಳಿ, ನಂತರ ತನ್ನ ಮನೆಗೆ ಹಿಂತಿರುಗಿದ. ಅಂದಿನ ವಿಹಾರದ ಸಂತೋಷ ತಪ್ಪಿಹೋಯಿತು. ಆದರೆ ನರೇಂದ್ರನಿಗೆ ಹಾಗೆ ಅನಿಸಲಿಲ್ಲ. ತನ್ನ ಸಂತೋಷ ಮುಖ್ಯ ಅಲ್ಲ, ಸ್ನೇಹಿತನ ಕಷ್ಟ ನಿವಾರಣೆ ಮುಖ್ಯ ಎಂಬುದು ಅವನ ಭಾವನೆ. ಅಂತಹ ತ್ಯಾಗ ಅವನ ಸ್ವಭಾವ. ಅವನಿಗೆ ಮಿತ್ರರೆಂದರೆ ತುಂಬಾ ಪ್ರೀತಿ.

ಸೇವೆಗೆ ಇದೊಂದು ಒಳ್ಳೆಯ ನಿದರ್ಶನ. ಸೇವೆ ಎಂದರೆ ಅಲ್ಲಿ ಪ್ರೀತಿ ಇರಬೇಕು. ಪ್ರೀತಿ ಇದ್ದಲ್ಲಿ ತ್ಯಾಗಭಾವನೆ ಸಹಜವಾಗಿ ಬರುತ್ತದೆ. ಹೀಗೆ ವಿವೇಕಾನಂದರ ಸೇವಾದರ್ಶ ಅವರ ಬಾಲ್ಯದಲ್ಲೇ ಕಾಣಿಸುತ್ತದೆ. ಅವರಲ್ಲಿದ್ದ ಸಹಜವಾದ ಸಹಾನುಭೂತಿ ಬೆಳೆಯುತ್ತ, ಪರಹಿತದಲ್ಲಿ ಸದಾ ತೊಡಗುವಂತೆ ಮಾಡಿತು; ಸಮಾಜ, ರಾಷ್ಟ್ರ ಮತ್ತು ಸಮಸ್ತ ಲೋಕದವರೆಗೆ ವ್ಯಾಪಿಸಿತು.

ಚಿಕ್ಕ ಬಾಲಕನಾಗಿದ್ದಾಗಲೇ ನರೇಂದ್ರನಲ್ಲಿ ಸೇವಾಮನೋಭಾವ ಸಹಜವಾಗಿ ಇತ್ತು ಎಂಬುದಕ್ಕೆ ಇನ್ನೊಂದು ಸೊಗಸಾದ ನಿದರ್ಶನವಿದೆ. ಒಮ್ಮೆ ನರೇಂದ್ರ ಬಂಧುವರ್ಗದಲ್ಲಿ ತನಗಿಂತ ಚಿಕ್ಕವನಾದ ಹುಡುಗನೊಬ್ಬನನ್ನು ಜಾತ್ರೆಗೆ ಕರೆದುಕೊಂಡು ಹೋದ. ಅವರೆಲ್ಲರೂ ಜಾತ್ರೆಯನ್ನೆಲ್ಲ ಸುತ್ತಾಡಿ, ಪುರಿ, ಬೆಂಡು, ಬತ್ತಾಸು, ಪೀಪಿ, ಶಿವನ ಬೊಂಬೆ ಎಲ್ಲವನ್ನೂ ಕೊಂಡುಕೊಂಡು, ಸಂಜೆಯ ವೇಳೆಗೆ ಮನೆಯ